ಓ.ಎಸ್.48-2012
ಪಿಡಬ್ಲು-೧

ದಿ: 19-09-2025 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: 3ನೇ ಪ್ರತಿವಾದಿ ಪರ ಶ್ರೀಯುತ ಡಿ.ವಿ.ಎಸ್. ವಕೀಲರಿಂದ.

10. ನಾನು ಏಳನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಕೂಲಿ ಕೆಲಸ ಮಾಡಿಕೊಂಡಿರುತ್ತೇನೆ. ನಾನು ಕೂಲಿ ಕೆಲಸದೊಂದಿಗೆ ವ್ಯವಸಾಯ ಮಾಡಿಕೊಂಡಿರುತ್ತೇನೆ. 1 ಮತ್ತು ೨ನೇ ವಾದಿಗಳು ಕೂಲಿ ಕೆಲಸ ಮಾಡಿಕೊಂಡಿದ್ದರು. ನಾನು ವ್ಯವಸಾಯ ಮಾಡಿಕೊಂಡಿರುವ ಜಮೀನಿನ ಸರ್ವೆ ನಂ.30 ಆಗಿರುತ್ತದೆ. ಆ ರೀತಿ ನಾನು ಸರ್ವೆ ನಂ.30 ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿರುತ್ತೇನೆ ಎಂದು ತೋರಿಸುವ ಕುರಿತು ಯಾವುದೇ ದಾಖಲೆಗಳು ಇರುವುದಿಲ್ಲ. ನನ್ನ ಸಂಪೂರ್ಣ ಹೆಸರು ಶ್ರೀರಾಮ. ಸಾಮಾನ್ಯ ಮುಖ್ತಾರ ನಾಮೆಯೊಂದಿಗೆ ನನ್ನ ಗುರುತಿನ ಕುರಿತು ಯಾವುದೇ ಗುರುತಿನ ಚೀಟಿಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿ.1 ರಲ್ಲಿರುವ ಸಹಿ ನನ್ನದಾಗಿರುತ್ತದೆ. ಸದರಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಪಿ.1(ಎ) ಎಂದು ಗುರುತಿಸಲಾಯಿತು.

11. ೧ ಮತ್ತು ೨ನೇ ವಾದಿಗಳು ವಿದ್ಯಾಭ್ಯಾಸ ಮಾಡಿರುವುದಿಲ್ಲ. ೧ನೇ ವಾದಿಗೆ ಸಹಿ ಮಾಡಲು ಬರುವುದಿಲ್ಲ ಮತ್ತು ೨ನೇ ವಾದಿಗೆ ಸಹಿ ಮಾಡಲು ಬರುತ್ತದೆ. ನಿಪಿ.1 ರಲ್ಲಿರುವ ೨ನೇ ವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿಪಿ.೧(ಬಿ) ಎಂದು ಗುರುತಿಸಲಾಯಿತು. ನನಗೆ ಬುದ್ದಿಬಂದ ಸಮಯದಲ್ಲಿ ೧ನೇ ವಾದಿ ವ್ಯವಸಾಯ ಮಾಡುತ್ತಿರಲಿಲ್ಲ ಮತ್ತು ೨ನೇ ವಾದಿ ವ್ಯವಸಾಯ ಮಾಡುತ್ತಿದ್ದರು. 2011ನೇ ಸಾಲಿನಲ್ಲಿ ೧ ಮತ್ತು ೨ನೇ ವಾದಿಗಳು ನಮ್ಮ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು. 1981-82 ನೇ ಸಾಲಿನಲ್ಲಿ ದಾವಾ ಜಮೀನ್ನನ್ನು ಮರುಮಂಜೂರು ಮಾಡಲಾಗಿರುತ್ತದೆ. ನಾನು ದಾವಾ ಜಮೀನು ಮರುಮಂಜೂರು ಮಾಡುವ ಸಮಯದಲ್ಲಿ ಜನಿಸಿರಲಿಲ್ಲ. ನಾನು ದಾವಾ ಜಮೀನು ಮರುಮಂಜೂರಾದ ಸಮಯದಲ್ಲಿ ಜನಿಸಿರದ ಮೇರೆಗೆ ದಾವಾ ಆಸ್ತಿಯ ಕುರಿತು ನನಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ.

12. ಮುತ್ಯಾಲಮ್ಮರವರ ತಾತನ ಹೆಸರು ದೇಖಾ ಇರುತ್ತದೆ. ಮುತ್ಯಾಲಮ್ಮರವರ ತಾತನ ಹೆಸರು ದೇಖಾ ಎನ್ನುವ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ಯಾವ ದಾಖಲೆ ಹಾಜರುಪಡಿಸಿರುತ್ತೀರಾ ಎಂದು ನೋಡಿ ಗುರುತಿಸಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂಬರ್ 147 ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿ ಮುತ್ಯಾಲಮ್ಮರವರಿಗೆ ನಾಲ್ಕು ಜನ ಮಕ್ಕಳು. ನನ್ನ ಅಜ್ಜಿ ಮುತ್ಯಾಲಮ್ಮ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಅಜ್ಜಿಗೆ ಸಹಿ ಮಾಡಲು ಬರುತ್ತಿರಲಿಲ್ಲ. ನನ್ನ ತಂದೆಗೆ ಯಾವುದೇ ಜಮೀನು ಮಂಜೂರು ಆಗಿರುವುದಿಲ್ಲ. ನಿಪಿ.13 ಮತ್ತು 14 ದಾಖಲೆಗಳಲ್ಲಿ ನನ್ನ ತಂದೆಗೆ ಸರ್ವೆ ನಂ.147 ಜಮೀನಿನಲ್ಲಿ 15.08 ಗುಂಟೆ ಜಮೀನು ಮಂಜೂರಾಗಿರುತ್ತದೆ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.